ಕರ್ನಾಟಕ ವಿಧಾನಸಭೆ

403; ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ರಾಜ್ಯವು ಪ್ರತಿ ದಿನ ಎದುರಿಸುತ್ತಿರುವ ವಿದ್ಯುತ್ ಕೊರತೆಯ ಪ್ರಮಾಣವೆಷ್ಟು;

ಆ) ಕೇಂದ್ರ ಉತ್ಪಾದನಾ ಘಟಕ (Central Grid) ನಿಂದ ಬರುತ್ತಿರುವ ವಿದ್ಯುತ್ ಪ್ರಮಾಣವೆಷ್ಟು;

ಇ) ಕೇಂದ್ರದ ವಿದ್ಯುತ್ ಉತ್ಪಾದನಾ ಗ್ರೀಡ್‌ನಿಂದ ಹೆಚ್ಚುವರಿಯಾಗಿ ವಿದ್ಯುತ್ ನೀಡಲು ರಾಜ್ಯ ಸರ್ಕಾರ ಕೇಂದ್ರವನ್ನು ಒತ್ತಾಯಿಸಿದೆಯೇ;

ಈ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರ, ರಾಜ್ಯದ ವಿದ್ಯುತ್ ಕೊರತೆಯನ್ನು ನೀಗಿಸಲು ಹೆಚ್ಚುವರಿಯಾಗಿ ಎಷ್ಟು ವಿದ್ಯುತ್ ನೀಡಲು ಒಪ್ಪಿಗೆ ಸೂಚಿಸಿದೆ?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ರಾಜ್ಯವು ಪ್ರತಿದಿನ ಸರಾಸರಿ ಸುಮಾರು 300–500 ಮೆಗಾವ್ಯಾಟ್‌ಗಳ ವಿದ್ಯುತ್ ಕೊರತೆಯನ್ನು ಎದುರಿಸುತ್ತಿದೆ.

ಆ) ಕೇಂದ್ರೀಯ ಉತ್ಪಾದನಾ ಘಟಕಗಳಿಂದ ರಾಜ್ಯಕ್ಕೆ ಹಂಚಿಕೆ ಮಾಡಲಾದ ವಿದ್ಯುತ್ತಿನ ಪ್ರಮಾಣವು 1919 ಮೆಗಾವ್ಯಾಟ್‌ಗಳಾಗಿರುತ್ತದೆ.

ನವೆಂಬರ್–2014 ರಲ್ಲಿ ಕೇಂದ್ರೀಯ ಘಟಕಗಳಿಂದ ರಾಜ್ಯಕ್ಕೆ ಪ್ರತಿದಿನ ಸರಾಸರಿ ಸುಮಾರು 1400 ಮೆಗಾವ್ಯಾಟ್‌ಗಳ ವಿದ್ಯುತ್ ಲಭ್ಯವಾಗಿರುತ್ತದೆ.

ಇ) ಹೌದು.

ಈ) ರಾಜ್ಯದ ವಿದ್ಯುತ್ ಕೊರತೆಯನ್ನು ನೀಗಿಸಲು ಕೇಂದ್ರ ಸರ್ಕಾರವು ಹೆಚ್ಚುವರಿ ವಿದ್ಯುತ್ ನೀಡಲು ಇಲ್ಲಿಯವರೆಗೆ ಒಪ್ಪಿಗೆ ಕೊಟ್ಟಿರುವುದಿಲ್ಲ.

Karnataka Legislative Assembly

403; Sri Gopalaiah K. (Mahalakshmi Layout)

a) What is the amount of power deficit facing by State everyday;

b) What is the amount Power receiving from Central Grid;

c) Is State Government demanding Central to supply additional power from Central Grid;

d) If so, what is the agreed amount of power provided by Central Government to meet the deficit;

Sri D.K. Shivakumar (Minister for Energy)

a) Everyday an average of about 300-500 megawatts of power deficit is in the state.

b) The amount of power allotted from Central Grid to State is 1919 MW.

During November-2014 every day an average of about 1400 megawatts of power was available from Central Grid to State.

c) Yes.

To supply additional Power to State grid, the Government has requested Central Government as follows:

- In letter dated: 11.07.2014, Central Government has been requested to supply 500MW of additional power to the State.

- In letter dated 14.11.2014, Central Government has been requested to re-allot, 50MW power allotted to Andhra pradesh from Kudankulam to Karnataka.

d) To meet the State power deficit, Central Government has not given concurrence till now to allot additional power,

ಕರ್ನಾಟಕ ವಿಧಾನ ಸಭೆ

855; ಶ್ರೀ ವಿಶ್ವನಾಥ್ ಈ. ಪಾಟೀಲ್

ಅ) ಸಮಗ್ರ ಜಲಾನಯನ ಅಭಿವೃದ್ಧಿ ಯೋಜನೆಯಡಿಯಲ್ಲಿ ಸರ್ಕಾರ ಬೆಳಗಾವಿ ಜಿಲ್ಲೆಯ ಯಾವ ಯಾವ ಕಾರ್ಯಕ್ರಮಗಳಿಗೆ ಹಣವನ್ನು ಮಂಜೂರು ಮಾಡಿದೆ. (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು);

ಆ) ಸದರಿ ಯೋಜನೆಯಿಂದ ರೈತರಿಗೆ ಆಗುವ ಪ್ರಯೋಜನಗಳಾವುವು; ಈ ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳಾವುವು (ವಿವರವಾದ ಮಾಹಿತಿ ನೀಡುವುದು)?

ಕೃಷಿ ಸಚಿವರು

ಅ) ಬೆಳಗಾವಿ ಜಿಲ್ಲೆಯಲ್ಲಿ ತೆಗೆದುಕೊಂಡ ಕಾರ್ಯಕ್ರಮಗಳ ವಿಧಾನಸಭಾ ಕ್ಷೇತ್ರವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

Details constituency-wise works taken up in Belgavi district are given in Annexure.

ಆ) ಸದರಿ ಯೋಜನೆಯಿಂದ ರೈತರಿಗೆ ಈ ಕೆಳಕಂಡಂತೆ ಪ್ರಯೋಜನಗಳಾಗುತ್ತವೆ.

1. ಸಮಗ್ರ ಜಲಾನಯನ ನಿರ್ವಹಣೆ ಯೋಜನೆಯಿಂದ ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳುವುದರಿಂದ